ದಿನಾಂಕ 29-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಸಂಃ1 ರ ಮೇಲೆ ಮುಖ್ಯ ವಿಚಾರಣೆ : 1(ಎ) ಡಿ.ಹೆಚ್ ಆರ್ ರವರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನನ್ನ ತಂದೆ ವಕೀಲರಿಗೆ ಮಾಹಿತಿ ನೀಡಿ ಬರೆಸಿರುತ್ತಾರೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ನನ್ನದೇ ಆಗಿರುತ್ತವೆ.

ಇದೇ ನ್ಯಾಯಾಲಯದ ಅಸಲು ದಾವಾ ಸಂಃ 16/2016 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-1 ಮತ್ತು 2 ಎಂದು ಮತ್ತು ಅರಳೇಶ್ವರ ಗ್ರಾಮದ ಆಸ್ತಿ ಸಂಃ62/1 ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ತೀರ್ಪುಋಣಿದಾರರ ಪರ ಶ್ರೀ ಐ.ಕೆ.ಹೆಚ್ ವಕೀಲರಿಂದಃ**

ತೀರ್ಪುಋಣಿದಾರರು ಮತ್ತು ಅವರ ವಕೀಲರು ಗೈರು ಹಾಜರು. ಮುಖ್ಯ ಅರ್ಜಿಗೆ ಆಗಲೀ ಅಥವಾ ಪ್ರಸ್ತುತ ಮಧ್ಯಂತರ ಅರ್ಜಿಗಾಗಲೀ ಅವರು ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ